- ಜನವರಿ ಸಂಚಿಕೆ ಹೊಸ ವರ್ಷಕ್ಕೆ ಹೊಸ ಅಂಕಣಗಳ ಭರಪೂರ ರಸದೂಟದೊಂದಿಗೆ ಮನಕ್ಕೆ ಮುದ ನೀಡಿತು. 'ಕಾಡಿಗೆ ಕಣ್ಣು' ಮುಖಪುಟ ವಿನ್ಯಾಸ ಆಕರ್ಷಿಸಿತು. ಅಶ್ವಿನಿ ಅರವಿಂದ ಅವರು ಕನ್ನಡಕ್ಕೆ ತಂದ ಯೊಹೊ ಮೂಹಿಕಾ ಅವರ ಸಂದರ್ಶನ ಅರ್ಥಗರ್ಭಿತವಾಗಿತ್ತು. 'ಕಾವ್ಯವು ಕವಿಯ ಸೃಷ್ಟಿ ಮಾತ್ರವಲ್ಲ, ಮನುಷ್ಯನನ್ನು ಸೃಷ್ಟಿಸುವುದು' ಎನ್ನುವ ಮಾತು ಮಾರ್ಮಿಕವಾಗಿತ್ತು.

**ಬಿ.ಆರ್. ಅಣ್ಣಾಸಾಗರ, ಸೇಡಂ**
**ಶಂಕರನಾರಾಯಣ ಭಟ್, ಹೊನ್ನಾವರ**

- ಕಲೀಮ್ ಉಲ್ಲಾ ಅವರ 'ಕಾಡಿಗೆ ಕಣ್ಣು' ಜಗತ್ತನ್ನು, ಪ್ರಕೃತಿಯನ್ನು ಹೊಸ ಕಣ್ಣಿನಿಂದ ನೋಡುವಂತೆ ಮಾಡಿದೆ. ಸಚಿತ್ರ ಲೇಖನ ಕಣ್ಮನ ಸೆಳೆಯುತ್ತಿದೆ.

**ಪ್ರತೀಕ್ಷಾ, ರಾಣೆಬೆನ್ನೂರು**

- ಅನುವಾದಿತ ಕಥೆ 'ಸೂಪರ್ ಮಾಮ್ ಸಿಂಡ್ರೋಮ್' (ಮೂಲ: ಪಿ. ಸತ್ಯವತಿ, ಕನ್ನಡಕ್ಕೆ: ಎ.ನಾಗಿಣಿ) ಹೊಸ ರೀತಿಯ ಓದಿನ ಅನುಭವ ನೀಡಿತು. ಸವಿತಾ ನಾಗಭೂಷಣ ಅವರ ಕವಿತೆ 'ಮಗು ಮತ್ತು ಹಕ್ಕಿ' ಇಷ್ಟವಾಯಿತು.

**ವಿಶ್ವಾಸ, ಗುಡಗೇರಿ**

- 'ಎಲ್ಲ ನಂಟನು ತೊರೆದು' ಪಿ.ಬಿ. ಪ್ರಸನ್ನ ಅವರ ಕಥೆ ತುಂಬಾ ಚೆನ್ನಾಗಿದೆ. ಕಥೆಯ ಅಂತ್ಯ ಚೇತೋಹಾರಿಯಾಗಿತ್ತು. ಜಾಜಿ ದೇವೇಂದ್ರಪ್ಪ ಅವರ 'ಪೆಟಾರಿ' ಕಥೆ ಕೂಡ ವಿಭಿನ್ನ ತಿರುವುಗಳ ಮೂಲಕ ಗಮನ ಸೆಳೆಯಿತು. ಈ ಸಲದ ಕವಿತೆಗಳೂ ಒಂದಕ್ಕಿಂತ ಒಂದು ಚಂದವೆನಿಸಿದವು.

**ಸೇತುರಾವ್ ಕುಲಕರ್ಣಿ, ಬೆಂಗಳೂರು,**
**ಆರ್.ಕೆ. ಮಿಜಾರ್, ಮೂಡಬಿದ್ರಿ**

- ಪಿ.ಲಂಕೇಶ್ ಬರೆದ 'ಬೇಂದ್ರೆಯವರ ಬಗ್ಗೆ ಮಾತಾಡಲು ಸಿದ್ಧತೆ' ಲೇಖನ ವಿವೇಚನಾ ಶಕ್ತಿಯನ್ನು ಚರ್ಚೆಗೆ ಒಡ್ಡುವಂತಿದೆ. ನಮ್ಮ ವ್ಯಕ್ತಿತ್ವ, ಸ್ಥಳೀಯ ಸಂಗತಿಗಳು, ಭಾಷೆ, ನಿದರ್ಶನಗಳ ಮುಖೇನ ಗಟ್ಟಿಗೊಳ್ಳಬೇಕು. ಆ ಮೂಲಕ ನಮ್ಮ ಸುತ್ತಲಿನ ಜಗತ್ತು ಕುರೂಪವಾಗದಂತೆ ಹೇಗೆ ಎಚ್ಚರ ವಹಿಸಬೇಕು ಎಂಬುದನ್ನು ಹಲವು ದೃಷ್ಟಾಂತಗಳ ಸಹಿತ ತಿಳಿಸುವಂತಿದೆ.

**ರಂಗಸ್ವಾಮಿ ಎಂ.ಜಿ., ಬೆಂಗಳೂರು**




- ದ.ರಾ. ಬೇಂದ್ರೆ ಅವರ 'ಸಖೀಗೀತ'ದ ಕುರಿತ ರಾಜೇಂದ್ರ ಚೆನ್ನಿಯವರ ಬರಹ 'ಕಂಗೊಳಿಸುವ ಕೆಂಪು ಮುಂದೆ ಕಂಗೆಡಿಸುವ ಮಂಜು ಹಿಂದೆ' ನಮ್ಮನ್ನು ಬೇಂದ್ರೆಯವರ ಕಾಲಕ್ಕೆ ಕರೆದುಕೊಂಡು ಹೋಯಿತು. 'ಕಾವ್ಯ ಜೂಟಾಟ'ದ ಮಾಲಿಕೆಗಳು ರಸದೌತಣ ನೀಡಿದವು.

**ಸಂತೆಬೆನ್ನೂರು ಮಂಜಪ್ಪ, ಭದ್ರಾವತಿ**

- ಉಜ್ಜಲ್ಲು ಕಥೆಯ (ಗುರುಪ್ರಸಾದ್ ಕಂಟಲಗೆರೆ) ವಿಶಿಷ್ಟ ಕಥಾಹಂದರ, ಸರಳ ನಿರೂಪಣೆ ಸುಲಲಿತವಾಗಿ ಓದಿಸಿಕೊಂಡು ಹೋಯಿತು.

**ಹೆಗ್ಗಾಪುರ ರಾಘವೇಂದ್ರ ಕುಲಕರ್ಣಿ, ಹೊಸಪೇಟೆ**